ಪ್ರತಿಯೊಂದು ಮೋಡಗಳೂ ಗ್ಯಾಲರಿಯ ಕಲಾಕೃತಿಗಳಿದ್ದಂತೆ. ಒಂದೊಂದು ಮೋಡಕ್ಕೂ ಒಂದೊಂದು ಆಕಾರ. ನೀಲಬಾನಿನ ಬೆಳ್ಳಿ ಮೇಘಗಳು ವಿವಿಧ ಸಂದರ್ಭಗಳಲ್ಲಿ ವಿವಿಧ ವಿನ್ಯಾಸಗಳಾಗಿ ಚಾಚಿಕೊಂಡಿರುತ್ತವೆ. ಕೆಲವೊಮ್ಮೆ ಮೋಡಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಾಣಿ, ಪಕ್ಷಿ ಅಥವಾ ಯಾವುದಾದರೂ ವಸ್ತುವಿನ ಮೂರ್ತ ಆಕಾರದಲ್ಲಿ ಕಂಡುಬರುತ್ತದೆ. ಆದರೆ ಅದನ್ನು ಗಮನಿಸುವ ಕಣ್ಮನಸ್ಸು ಬೇಕು.. ಅಷ್ಟೇ.

ಮೋಡಗಳು ಕೆಲವೊಮ್ಮೆ ಬಿಡು ಬಿಡುವಾಗಿದ್ದು ಭಿನ್ನಮತೀಯರಂತಿರುತ್ತವೆ! ಕೆಲವೊಮ್ಮೆ ಕಡುವಾಗಿದ್ದು ವಿಶಾಲವಾಗಿ ಹರಡಿ ಯಾವುದೋ ಸಮ್ಮೇಳನದಲ್ಲಿ ಭಾಗವಹಿಸಿದಂತೆ ಕಾಣುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಆಕಾಶವನ್ನು ಕ್ಯಾನ್ವಾಸಿಗೆ ಹೋಲಿಸಬಹುದು. ಮಳೆಗಾಲದ ಕಾರ್ಮೋಡ, ಬೇಸಿಗೆ ಕಾಲದ ಬಿಳಿ ಮೋಡ ಕ್ಯಾನ್ವಾಸಿನ ಮೇಲೆ ಬಣ್ಣ ಬಳಿದಂತೆ ಕಂಡು ಬರುತ್ತದೆ.



ಸೂರ್ಯೋದಯ, ಸೂರ್ಯಾಸ್ತಮಾನದ ಕಾಲದಲ್ಲಂತೂ ಮೋಡಗಳು ಬಿಳಿ, ಹಳದಿ, ಕೆಂಪು, ಕಂದು ಬಣ್ಣಗಳ ಸಂಗಮವಾಗಿ ಬಾನೆಂಬ ಕ್ಯಾನ್ವಾಸ್‌ನಲ್ಲಿ ನಿಸರ್ಗದ ಸಹಜ ಕಲಾಕೃತಿ ಅಭಿವ್ಯಕ್ತವಾಗುತ್ತದೆ. ಬೆಟ್ಟಕ್ಕೂ, ಮೋಡಕ್ಕೂ ಇರುವ ನಂಟು ಪರ್ಮನೆಂಟು. ಪಶ್ಚಿಮ ಘಟ್ಟಗಳ ಹಾಗೂ ಮೋಡಗಳ ಪ್ರಣಯ ದೃಶ್ಯಗಳನ್ನು ನೋಡಲು ಯಾವುದಾದರೂ ಘಾಟಿ ರಸ್ತೆಯಲ್ಲಿ ಪಯಣಿಸಬೇಕು. ಮೋಡಗಳು ಶಿಖರಗಳನ್ನು ಚುಂಬಿಸಿಕೊಂಡು, ಆಲಂಗಿಸಿಕೊಂಡು ಪ್ರಣಯ ನಿರತವಾಗಿರುತ್ತವೆ. ಚಾರಣಗರಿಗಂತೂ ಈ ದೃಶ್ಯ ಸದಾ ತೆರೆದ ಬಾಗಿಲು. ಕುದುರೆಮುಖ, ಮುಳ್ಳಯ್ಯನ ಗಿರಿಯಂತಹ ಬೆಟ್ಟಗಳ ತುದಿಗೆ ಹೋದರೆ ನಾವು ಮೋಡಗಳೊಂದಿಗೆ ಸಂವಾದಕ್ಕೆ ಇಳಿಯಬಹುದು. ಮೋಡಗಳು ಶಿಖರಗಳ ಶೃಂಗಕ್ಕೆ ಬಾಗಿದಾಗ ಶಿಖರಗಳಿಗೆ ಮೇಘದಾಭರಣದ ಶೃಂಗಾರವಾಗುತ್ತದೆ.

ಕೆಲವು ಕಲಾವಿದರಿಗೆ ಚಿತ್ರ ರಚಿಸಲು, ಕವಿಗಳಿಗೆ ಕವಿತೆ ಹೊಸೆಯಲು ಆಕಾಶ ಮತ್ತು ಮೋಡಗಳೇ ಸ್ಫೂರ್ತಿ, ಪ್ರೇರಣೆ. ಕೆಲವು ಸಿನಿಮಾಗಳಲ್ಲೂ ನಾಯಕ, ನಾಯಕಿಯರ ಪ್ರೇಮದ ಹಾಡಿಗೆ ಹಿನ್ನೆಲೆಯಾಗಿ ಮೋಡಗಳನ್ನೇ ಸೆರೆ ಹಿಡಿಯುವುದು ವಾಡಿಕೆಯಾಗಿಬಿಟ್ಟಿದೆ.

ಹಾಗಂತ ಮೋಡಗಳು ಎಲ್ಲಾ ಹೋಲಿಕೆಗಳಿಗೆ ಆಲಿಕೆಯಾಗದು. ಕೆಲವೊಮ್ಮೆ ತಮ್ಮ ಉಗ್ರಪ್ರತಾಪ ತೋರಿಸುವುದೂ ಉಂಟು. ಮಳೆಗಾಲದಲ್ಲಿ ಧಾರಾಕಾರವಾಗಿ ಮಳೆ ಸುರಿದು ನಮ್ಮ ಕೆಲಸಕ್ಕೇನಾದರೂ ಅಡ್ಡಿಯಾದರೆ ನಾವು ಮಳೆಗೆ ಕಾರಣೀಭೂತವಾದ ಮೋಡಗಳಿಗೆ ಬೈದುಬಿಡುತ್ತೇವೆ. ಹಾಗಂತ ಬೇಸಿಗೆ ಕಾಲದಲ್ಲಿ ಹಾಯಾಗಿದ್ದ ಮೋಡಗಳನ್ನು ನೋಡಿ ಉರಿ ಬಿಸಿಲೆಂದು ಶಾಪ ಹಾಕುತ್ತೇವೆ. ಮನುಜರ ಭಾವನೆಗಳಿಗೆ ಸರಿಯಾಗಿ ಇರಲು, ಮೋಡಗಳಿಗೆ ಮಾತ್ರವಲ್ಲ.. ಯಾರಿಂದಲೂ ಸಾಧ್ಯವಿಲ್ಲ ಬಿಡಿ!

